## ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಶೈಶಾ-01/ಕಟ್ಟಡ/ಅಪೆಂಡಿಕ್ಸ್-ಇ/01/2012-13

ಆಯುಕ್ತರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12.
ದಿನಾಂಕ: 06-08-2012.

## ಜ್ಞಾಪನ

**ವಿಷಯ:** 2012-13 ನೇ ಸಾಲಿಗೆ ಅಪೆಂಡಿಕ್ಸ್-ಇ ಯೋಜನೆಯ ಅಡಿಯಲ್ಲಿ ಮುಂದುವರೆದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ಕಾಮಗಾರಿಗಾಗಿ 2ನೇ ನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಇಡಿ 89 ಯೋಯೋಕ 2012, ದಿನಾಂಕ: 21-07-2012
(ಇಡಿ 26 ಸ್ತಿಮರ(ಯುನಿಕ್)2009, ದಿನಾಂಕ:21-07-2012)

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2011-12 ನೇ ಸಾಲಿಗೆ ಅಪೆಂಡಿಕ್ಸ್-ಇ ಅಡಿಯಲ್ಲಿ ಮುಂದುವರೆದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ, ಈ ಹಿಂದೆ ಬಿಡುಗಡೆ ಮಾಡಲಾಗಿರುವ ಮೊದಲನೇ ತ್ರೈ-ಮಾಸಿಕ ಅನುದಾನವನ್ನು ದಕ್ಷಿಣ ಹಾಗೂ ಉತ್ತರ ವಲಯದ ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರುಗಳು ಉಪಯೋಗಿಸಿಕೊಂಡಿರುತ್ತಾರೆ. ಹಾಗೂ ದಕ್ಷಿಣ ಹಾಗೂ ಉತ್ತರ ವಲಯದ ಮುಖ್ಯ ಅಭಿಯಂತರರು ಬಾಕಿ ಬಿಲ್ಲುಗಳನ್ನು ತಕ್ಷಣ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಅಪೆಂಡಿಕ್ಸ್-ಇ ಅಡಿಯಲ್ಲಿ ಮುಂದುವರೆದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ 2012-13 ನೇ ಸಾಲಿಗೆ ಒದಗಿಸಲಾಗಿರುವ ಅನುದಾನದಲ್ಲಿ ಎರಡನೇ ತ್ರೈ-ಮಾಸಿಕ ಕಂತಿನ ಅನುದಾನ ರೂ. 300.00 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲು ಉಲ್ಲೇಖಿತ ಸರ್ಕಾರದ ಆದೇಶದಂತೆ ಅನುಮತಿ ನೀಡಲಾಗಿದೆ. ಅದರಂತೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ:**

2011-12 ನೇ ಸಾಲಿಗೆ ಅಪೆಂಡಿಕ್ಸ್-ಇ ಅಡಿಯಲ್ಲಿ ಮುಂದುವರೆದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಗಳಿಗಾಗಿ ಮುಖ್ಯ ಅಭಿಯರಂತರರು, ಲೋಕೋಪಯೋಗಿ ಇಲಾಖೆ, ದಕ್ಷಿಣ ವಲಯ, ಬೆಂಗಳೂರು ಇವರಿಗೆ ರೂ.38.00 ಲಕ್ಷಗಳು ಮತ್ತು ಲೋಕೋಪಯೋಗಿ ಇಲಾಖೆ, ಉತ್ತರ ವಲಯ, ಧಾರವಾಡ ಇವರಿಗೆ ರೂ.83.14 ಲಕ್ಷಗಳು ಒಟ್ಟು ರೂ.121.14 ಗಳನ್ನು ಉಲ್ಲೇಖಿತ ಸರ್ಕಾರದ ಆದೇಶದಂತೆ 2012-13 ನೇ ಸಾಲಿಗೆ ಒದಗಿಸಲಾಗಿರುವ 300.00 ಲಕ್ಷಗಳಲ್ಲಿ ಸದರಿ ಹಣವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಎರಡನೇ ತ್ರೈ-ಮಾಸಿಕ ಕಂತಿನ ಅನುದಾನವಾಗಿ ಬಿಡುಗಡೆ ಮಾಡಲಾಗಿದೆ. ಹಣ ಬಿಡುಗಡೆ ಮಾಡಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನು (ಅನುಬಂಧ-1 ಮತ್ತು ಅನುಬಂಧ-2) ಇದರೊಂದಿಗೆ ಲಗತ್ತಿಸಿದೆ. ಈ ಅನುದಾನವನ್ನು ಸಂಬಂಧಿಸಿದ ಕಾಮಗಾರಿಗಳಿಗೆ ತಕ್ಷಣ ಬಿಡುಗಡೆ ಮಾಡಿ ಅನುದಾನವನ್ನು ತುರ್ತಾಗಿ ಖರ್ಚು ಮಾಡುವಂತೆ ತಿಳಿಸಲಾಗಿದೆ. ಈಗ ಬಿಡುಗಡೆ ಮಾಡಿರುವ ಅನುದಾನಕ್ಕೆ ಉಪಯೋಗ್ಯತಾ ಪ್ರಮಾಣ ಪತ್ರವನ್ನು (ಬಳಕೆ ಪ್ರಮಾಣ ಪತ್ರ) ತಪ್ಪದೆ ಈ ಕಛೇರಿಗೆ ಕಳುಹಿಸಿಕೊಡುವಂತೆ ತಿಳಿಸಲಾಗಿದೆ.

**ಷರತ್ತುಗಳು:**

1. ಈ ಅನುದಾನವನ್ನು ಅನುಬಂಧದಲ್ಲಿ ತಿಳಿಸಿರುವ ಕಾಮಗಾರಿಗಳಿಗೆ ಮಾತ್ರ ಬಿಡುಗಡೆ ಮಾಡತಕ್ಕದ್ದು. ಪಟ್ಟಿಯಲ್ಲಿ ತಿಳಿಸಿರುವ ಕಾಮಗಾರಿಗಳ ಹೊರತುಪಡಿಸಿ ಯಾವುದೇ ಕಾಮಗಾರಿಗೂ ಹಣ ಬಿಡುಗಡೆ ಮಾಡಬಾರದು.

. . .2

2. ಈಗ ಬಿಡುಗಡೆ ಮಾಡುತ್ತಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರವೇ, ನಂತರದ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.
3. ಅನುಬಂಧದಲ್ಲಿ ಬಿಡುಗಡೆ ಮಾಡುತ್ತಿರುವ ಮೊತ್ತವು ಬೇರೆ ಯಾವುದೇ ಬಿಲ್ಲಿನಲ್ಲಿ ಪಾವತಿಯಾಗಿರಬಾರದು. (ಎರಡು ಬಾರಿ ಹಣ ಪಾವತಿಯಾಗದಂತೆ ನೋಡಿಕೊಳ್ಳುವುದು)
4. ಕಟ್ಟಡ ನಿರ್ಮಾಣದ ಗುಣಮಟ್ಟವನ್ನು ಪರಿಶೀಲಿಸಿ ಸಂಬಂಧಿಸಿದ ಗುತ್ತಿಗೆದಾರರಿಗೆ ಹಣ ಪಾವತಿಸುವುದು.

ಮೇಲ್ಕಂಡ ಅನುದಾನವನ್ನು ಲೆಕ್ಕಶೀರ್ಷಿಕೆ 4202–01–203–1–07–386ರ ಯೋಜನೆಯಡಿ ಡ್ರಾ ಮಾಡಲು ಸೂಚಿಸಿದೆ.

ಆಯುಕ್ತರು
ಪದವಿ ಪೂರ್ವ ಶಿಕ್ಷಣ ಇಲಾಖೆ.

<u>ಪ್ರತಿಗಳು:</u>

1. ಮುಖ್ಯ ಅಭಿಯಂತರರು, ದಕ್ಷಿಣ (ಸಂಪರ್ಕ ಮತ್ತು ಕಟ್ಟಡ) ಲೋಕೋಪಯೋಗಿ ಇಲಾಖೆ, ಬೆಂಗಳೂರು
2. ಮುಖ್ಯ ಅಭಿಯಂತರರು, ಉತ್ತರ (ಸಂಪರ್ಕ ಮತ್ತು ಕಟ್ಟಡ) ಲೋಕೋಪಯೋಗಿ ಇಲಾಖೆ, ದಾರವಾಢ.
3. ಖಜಾನಾಧಿಕಾರಿಗಳು, ರಾಜ್ಯಹುಜೂರ್ ಖಜಾನೆ, ಬೆಂಗಳೂರು.
4. ಲೆಕ್ಕಪತ್ರಾಧಿಕಾರಿಗಳು, ಲೆಕ್ಕಪತ್ರಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಎಲ್ಲಾ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

**ಅನುಬಂಧ-1**

ಅಪೆಂಡಿಕ್ಸ್-ಇ ಯೋಜನೆಗೆ ಸಂಬಂಧಿಸಿದಂತೆ ಆದೇಶ ಸಂಖ್ಯೆ ಸಂಖ್ಯೆ:ಪಪೂಶಿಇ/ಕಟ್ಟಡ/ ಅಪೆಂಡಿಕ್ಸ್-ಇ/01/2012-13 ದಿನಾಂಕ: 06-08-2012 ರಲ್ಲಿ ತಿಳಿಸಿರುವ ಅನುದಾನವನ್ನು ಬಿಡುಗಡೆ ಮಾಡಬೇಕಾಗಿರುವ ಕಾಮಗಾರಿಗಳ ಪಟ್ಟಿ

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಕಾಮಗಾರಿಯ ಹೆಸರು | ಬಿಡುಗಡೆ ಮಾಡಿರುವ ಮೊತ್ತ |
|---|---|---|
| 1 | 2 | 3 |
| | **ತುಮಕೂರು ವಿಭಾಗ** | |
| 1 | ತುಮಕೂರಿನಲ್ಲಿ ಸರ್ಕಾರಿ ಕಿರಿಯ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾಮಗಾರಿ | 1.00 |
| 2 | ಕೋಟಗುಡ್ಡ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಲಾ ಮತ್ತು ವಾಣಿಜ್ಯ ಕಾಲೇಜು ಕಟ್ಟಡಕ್ಕೆ ಹೆಚ್ಚುವರಿ ಕೊಠಡಿ ನಿರ್ಮಾಣ | 2.56 |
| 3 | ಕೊರಟಗೆರೆ ತಾ. ಇರಕಸಂದ್ರ ಕಾಲೋನಿಯಲ್ಲಿ ಸರ್ಕಾರಿ ಕಿರಿಯ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿ | 1.20 |
| | **ಮೈಸೂರು ವಿಭಾಗ** | |
| 4 | ಮೈಸೂರಿನ ಕುವೆಂಪು ನಗರದಲ್ಲಿ ಪಿಯು ಕಾಲೇಜು ಕಟ್ಟಡ ನಿರ್ಮಾಣ | 1.46 |
| 5 | ನಂಜನಗೂಡು ತಾ. ಕೌಲಂದೆಯಲ್ಲಿ ಜ್ಯೂನಿಯರ್ ಕಾಲೇಜು ಕಟ್ಟಡ ನಿರ್ಮಾಣ | 0.45 |
| 6 | ಬನ್ನೂರಿನಲ್ಲಿ ಮಹಿಳೆಯರ ಪದವಿ ಪೂರ್ವ ಕಾಲೇಜಿಗೆ 4 ಕೊಠಡಿ ನಿರ್ಮಾಣ | 0.85 |
| | **ಮಂಡ್ಯ ವಿಭಾಗ** | |
| 7 | ಮದ್ದೂರು ಪಟ್ಟಣದಲ್ಲಿ ಕಂಬೈನ್ಡ್ ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ | 0.04 |
| 8 | ಮದ್ದೂರು ತಾ. ಅನ್ನೂರಿನಲ್ಲಿ ಕಂಬೈನ್ಡ್ ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ | 0.82 |
| | **ಹಾಸನ ವಿಭಾಗ** | |
| 9 | ಮೊಸಲೇಹೊಸಹಳ್ಳಿಯಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ | 1.72 |
| 10 | ಹಾಸನದ ದುದ್ದಾ ಆರ್‌ಎಸ್‌ನಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ | 0.71 |
| 11 | ಸಾತೇನಹಳ್ಳಿಯಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜು ಕಟ್ಟಡ ನಿರ್ಮಾಣ | 0.72 |
| | **ಹಾಸನ ವಿಶೇಷ ವಿಭಾಗ** | |
| 12 | ಕೊಣನೂರಿನಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜು ಕಟ್ಟಡ ನಿರ್ಮಾಣ | 0.69 |

...2

| | | |
|---|---|---|
| 13 | ಸಕಲೇಶಪುರ ತಾ. ವಣಗೂರಿನಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜು ಕಟ್ಟಡ ನಿರ್ಮಾಣ | 20.00 |
| | **ಶಿವಮೊಗ್ಗ ವಿಭಾಗ** | |
| 14 | ರಿಪ್ಪನ್‌ಪೇಟೆಯಲ್ಲಿ ಸರ್ಕಾರಿ ಕಿರಿಯ ಕಾಲೇಜಿಗೆ ಹೆಚ್ಚುವರಿ ಕೊಠಡಿ ನಿರ್ಮಾಣ | 0.98 |
| 15 | ಶಿಕಾರಿಪುರದಲ್ಲಿ ಬಾಲಕರ ಜೂ. ಕಾಲೇಜು ಕಟ್ಟಡ ನಿರ್ಮಾಣ | 0.89 |
| | **ಉಡುಪಿ ವಿಭಾಗ** | |
| 16 | ಕಾಪು ತಾ. ಯರ್ಮಾಳುಬಾಡದಲ್ಲಿನ ಸರ್ಕಾರಿ ಕಿರಿಯ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ | 1.97 |
| 17 | ಕುಂದಾಪುರದಲ್ಲಿ ಗೋಳಿಯಂಗಡಿಯಲ್ಲಿ ಸರ್ಕಾರಿ ಕಿರಿಯ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ | 0.91 |
| | **ಕೊಡಗು ವಿಭಾಗ** | |
| 18 | ಮಡಿಕೇರಿಯಲ್ಲಿ ನಾಪೋಕ್ಲು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ | 1.03 |
| | ಒಟ್ಟು | **38.00** |

ಆಯುಕ್ತರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಅನುಬಂಧ-2**

ಅಪೆಂಡಿಕ್ಸ್-ಇ ಯೋಜನೆಗೆ ಸಂಬಂಧಿಸಿದಂತೆ ಆದೇಶ ಸಂಖ್ಯೆ ಸಂಖ್ಯೇಪಪೂಶಿಇ/ಕಟ್ಟಡ/ ಅಪೆಂಡಿಕ್ಸ್-ಇ/01/2012-13 ದಿನಾಂಕ: 06-08-2012 ರಲ್ಲಿ ತಿಳಿಸಿರುವ ಅನುದಾನವನ್ನು ಬಿಡುಗಡೆ ಮಾಡಬೇಕಾಗಿರುವ ಕಾಮಗಾರಿಗಳ ಪಟ್ಟಿ

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಕಾಮಗಾರಿಯ ಹೆಸರು | ಬಿಡುಗಡೆ ಮಾಡಿರುವ ಮೊತ್ತ |
|---|---|---|
| 1 | ಬೊಮ್ಮಿಗಟ್ಟಿಯಲ್ಲಿ ಜ್ಯೂನಿಯರ ಕಾಲೇಜ ಕಟ್ಟಡ ನಿರ್ಮಾಣ | 0.48 |
| | **ಚಿಕ್ಕೋಡಿ ವಿಭಾಗ** | |
| 2 | ಚಿಕ್ಕೋಡಿ ತಾಲೂಕ ಬೋರಗಾಂವ ಗ್ರಾಮದಲ್ಲಿ ಜ್ಯೂನಿಯರ ಕಾಲೇಜು ಕಟ್ಟಡ ನಿರ್ಮಾಣ | 2.13 |
| 3 | ಚಿಕ್ಕೋಡಿ ತಾಲೂಕ ಸದಲಗಾದಲ್ಲಿ ಜ್ಯೂನಿಯರ ಕಾಲೇಜು ಕಟ್ಟಡ ನಿರ್ಮಾಣ | 2.02 |
| 4 | ಚಿಕ್ಕೋಡಿ ತಾಲೂಕಿನ ಗಲತಗಾದಲ್ಲಿ ಜ್ಯೂನಿಯರ್ ಕಾಲೇಜು ಕಟ್ಟಡ ನಿರ್ಮಾಣ. | 0.75 |
| 5 | ಖಡಕಲಾಟ್‌ದಲ್ಲಿ ಜ್ಯೂನಿಯರ ಕಾಲೇಜು ಕಟ್ಟಡ ನಿರ್ಮಾಣ | 7.01 |
| | **ಬಿಜಾಪೂರ ವಿಭಾಗ** | |
| 6 | ಬಸವನಬಾಗೇವಾಡಿ ತಾಲೂಕಿನ ಸಾಸನೂರದಲ್ಲಿ ಪದವಿ ಪೂರ್ವ ಕಾಲೇಜು ನಿರ್ಮಾಣ | 10.30 |
| | **ಗುಲಬರ್ಗಾ ವಿಭಾಗ** | |
| 7 | ಚಿಂಚೋಳ್ಳಿ ತಾಲೂಕಿನ ಸುಲೇಪೇಟ್‌ದಲ್ಲಿ ಜ್ಯೂನಿಯರ್ ಕಾಲೇಜು ಕಟ್ಟಡ ನಿರ್ಮಾಣ | 2.00 |
| | **ಯಾದಗಿರಿ ವಿಭಾಗ** | |
| 8 | ಸುರಪೂರ ತಾಲೂಕಿನ ಕೋಡೆಕಲ್ ಗ್ರಾಮದಲ್ಲಿ ಜ್ಯೂನಿಯರ ಕಾಲೇಜ ಕಟ್ಟಡ ನಿರ್ಮಾಣ | 10.00 |
| 9 | ಸುರಪೂರ ತಾಲೂಕಿನ ಕೆಂಬಾವಿ ಗ್ರಾಮದಲ್ಲಿ ಜ್ಯೂನಿಯರ ಕಾಲೇಜ ಕಟ್ಟಡ ನಿರ್ಮಾಣ | 7.45 |
| | **ಬೀದರ ವಿಭಾಗ** | |
| 10 | ಬಸವಕಲ್ಯಾಣದಲ್ಲಿ ನೀಲಾಂಬಿಕಾ ಹೆಣ್ಣು ಮಕ್ಕಳ ಜ್ಯೂನಿಯರ ಕಾಲೇಜು ಕಟ್ಟಡ ನಿರ್ಮಾಣ | 20.00 |
| 11 | ಹಾಲಹಳ್ಳಿಯಲ್ಲಿ ಜ್ಯೂನಿಯರ ಕಾಲೇಜು ಕಟ್ಟಡ ನಿರ್ಮಾಣ | 21.00 |
| | ಒಟ್ಟು | **83.14** |

**ಆಯುಕ್ತರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.